**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ 410/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಎಸ್. ಸಿದ್ದಪ್ಪ | ಪ್ರಮಾಣ ಮಾಡಿದ ದಿನಾಂಕಃ 01.06.2026 |
| ತಂದೆ ಹೆಸರು | | ಸಿದ್ದಲಿಂಗಯ್ಯ | |
| ವಯಸ್ಸು | | 59 ವರ್ಷ | |
| ವೃತ್ತಿ | | ಸಹಾಯಕ ಕಾರ್ಯಪಾಲಕ ಇಂಜಿನಿಯರ್ | ಚಾಸಾ: 06 |
| ವಾಸಸ್ಥಳ | | ಬೆಂಗಳೂರು | ಫ್ರಾಸಾ: 06 |

**ದಿನಾಂಕಃ 01.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ**

ದಿಃ 17.07.2013 ರಿಂದ ದಿಃ 07.06.2025 ರವರೆಗೆ ಗುಂಡ್ಲುಪೇಟೆಯಲ್ಲಿ ಸಹಾಯಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 06.08.2024 ರಂದು ಚಾಸಾ-8 ರವರು ನನಗೆ ಮನವಿ ನೀಡಿದ ಮೇರೆಗೆ ಅವರ ಜೊತೆ ನಾನು ಚಾಸಾ-1 ರವರ ಜಮೀನಿಗೆ ಹೋಗಿ ಸ್ಥಳ ಪರಿಶೀಲಿಸಿ ನಷ್ಟವಾದ ಬಗ್ಗೆ ವರದಿ ತಯಾರಿಸಿ ದಿಃ 20.08.2024 ಅಂದಾಜು ಮೌಲ್ಯ ವರದಿಯನ್ನು ತಯಾರಿಸಿ ಸಲ್ಲಿರುತ್ತೇನೆ. ಸಾಕ್ಷಿಯು ನಿಪಿ7 ರಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ7(ಬಿ) ಎಂದು ಗುರುತಿಸಲಾಯಿತು. ನಿಪಿ7 ರ ಪ್ರಕಾರ ರೂ.1,21,600/- ಗಳು ನಷ್ಟವಾಗಿದೆ ಎಂದು ಮೌಲ್ಯ ಮಾಪನ ಮಾಡಿರುತ್ತೇನೆ. ನಾನು ಸ್ಥಳ ಪರಿಶೀಲನೆ ಮಾಡಿದಾಗ ಆರ್.ಸಿ.ಸಿ ಕಂಬಗಳು 57, ಮತ್ತು 171 ಮೀಟರ್ ಉದ್ದರ ವೈರ್ ನಷ್ಟವಾಗಿರುವುದು ಕಂಡುಬಂದಿರುತ್ತದೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದಃ**

ದಿಃ 06.08.2024 ರಂದು ಚಾಸಾ-8 ರವರು ನನಗೆ ಮನವಿ ನೀಡಿರುತ್ತಾರೆ. ಅದರಂತೆ ನಾನು ದಿಃ 17.08.2024 ರಂದು ಸ್ಥಳ ಪರಿಶೀಲನೆ ಮಾಡಿರುತ್ತೇನೆ. ಸ್ಥಳ ಪರಿಶೀಲನೆ ಮಾಡುವ

ಕಾಲಕ್ಕೆ ನಾನು ಮತ್ತು ಚಾಸಾ-8 ರವರು ಮಾತ್ರ ಇದ್ದೇವು. ಇತರ ಸಾಕ್ಷಿದಾರರು ಇರಲಿಲ್ಲ. ಚಾಸಾ-7 ರವರ ಸಮಕ್ಷಮ ಫೋಟೋಗಳನ್ನು ತೆಗೆಯಲಾಗಿರುತ್ತದೆ ಆದರೆ ವಿಡೀಯೋ ಮಾಡಲಾಗಿಲ್ಲ. ನಿಪಿ7 ರ ಜೊತೆಗೆ ಫೋಟೋಗಳನ್ನು ಸಲ್ಲಿಸಲು ತೊಂದರೆ ಇರಲಿಲ್ಲ. ಒಂದು ಕಂಬಕ್ಕೆ ಸರ್ಕಾರಿ ದರ ರೂ.1,085/- ಇತ್ತು ಎಂದು ತೋರಿಸಲು ನಾನು ದಾಖಲೆ ಹಾಜರುಪಡಿಸಿಲ್ಲ. ಸದರಿ ಕಬ್ಬಿಣದ ಮುಳ್ಳು ತಂತಿಯ ಸರ್ಕಾರಿ ಬೆಲೆಯ ಕುರಿತು ದಾಖಲೆಯನ್ನು ಹಾಜರುಪಡಿಸಿಲ್ಲ. ನಿಪಿ7 ನ್ನು ಚಾಸಾ-8 ರವರ ಕೋರಿಕೆ ಮೇರೆಗೆ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳವನ್ನು ನಾನು ಪರಿಶೀಲಿಸಿದರೆ ನಾನು ವಿಡೀಯೋವನ್ನು ಹಾಜರುಪಡಿಸುತ್ತಿದ್ದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ